



**ರಿತ್ವಿಕ್ ವಿ.**
5ನೇ ತರಗತಿ,
ಇಂಡಿಯನ್ ಇಂಟರ್
ನ್ಯಾಷನಲ್ ಶಾಲೆ,
ಚಿತ್ರದುರ್ಗ



**ಭವಿಷ್ ಸಿ.**
2ನೇ ತರಗತಿ, ಕ್ರಿಸಲಿಸ್ ಹೈಸ್ಕೂಲ್, ಬೆಂಗಳೂರು





# ಮಕ್ಕಳು ಬಂದರು ದಾರಿ ಬಿಡಿ

**ಸೋಮಲಿಂಗ ಬೇಡರ, ಆಳೂರ**

ಕಲೆ: ಸಂತೋಷ್ ಸಸಿಹಿತ್ಲು

ಮಕ್ಕಳು ಬಂದರು ದಾರಿ ಬಿಡಿ
ಸಾಗಲಿ ಮುಂದಕೆ ತಡೆಯದಿರಿ
ನಿಮ್ಮಯ ದಾರಿಯ ತೋರದಿರಿ
ಅವರದೆ ದಾರಿಯು ಬೇರೆಯಿದೆ

ಏಳಲಿ ಬೀಳಲಿ ಸುಮ್ಮನಿರಿ
ಮಾತನು ಕೇಳರು ಎನ್ನದಿರಿ
ಸುಮ್ಮನೆ ಮನದಲಿ ಕೊರಗದಿರಿ
ಅವರದೆ ದಾರಿಯು ಬೇರೆಯಿದೆ

ನಿಮ್ಮಯ ಕತೆಯನು ಹೇಳದಿರಿ
ಕಟ್ಟಳೆಗಳನ್ನು ಹೇರದಿರಿ
ಸ್ವತಂತ್ರ ಬದುಕನು ಕಸಿಯದಿರಿ
ಅವರದೆ ದಾರಿಯು ಬೇರೆಯಿದೆ

ಓಟಕೆ ತಡೆಯನು ಹಾಕದಿರಿ
ಸೋಲಿಗೆ ನಿಂದನೆ ಮಾಡದಿರಿ
ಗೆಲುವಿನ ಆಸೆಯ ಚಿವುಟದಿರಿ
ಅವರದೆ ದಾರಿಯು ಬೇರೆಯಿದೆ

ನಿಮ್ಮಂತಾಗಲು ಬಯಸದಿರಿ
ಕನಸಿನ ಗೋಪುರ ಕೆಡುಹದಿರಿ
ಒಲ್ಲದ ಮಾರ್ಗಕೆ ತಳ್ಳದಿರಿ
ಅವರದೆ ದಾರಿಯು ಬೇರೆಯಿದೆ

ಮಕ್ಕಳು ಬಂದರು ದಾರಿಬಿಡಿ
ಸಾಗಲಿ ಮುಂದಕೆ ತಡೆಯದಿರಿ
ನಿಮ್ಮಯ ದಾರಿಯ ತೋರದಿರಿ
ಅವರದೆ ದಾರಿಯು ಬೇರೆಯಿದೆ